ಶ್ರೀ ಬಿ.ಎನ್.ಬಚ್ಚೇಗೌಡ: ನಾವು 1997ರವರೆಗೆ ಕಚ್ಚಾ ನೀರಿಗೆ ಒಂದು ರೂಪಾಯಿ 85 ಪೈಸೆ ಫಿಕ್ಸ್ ಮಾಡಿದ್ದೆವು ಸಾವಿರ ಲೀಟರ್‌ಗೆ. 1997ರ ನಂತರ ಅಂದರೆ 17-7-1997ರಿಂದ ಕಚ್ಚಾ ನೀರಿಗೆ 9.64 ಪೈಸೆ ಮಾಡಿದ್ದೇವೆ. ಅಲ್ಲಿ ಏನಾದರೂ ವ್ಯತ್ಯಾಸ ಮಾಡುವ ತೀರ್ಮಾನ ಆಗಬೇಕಾದರೆ ಸುಧೀರ್ಘವಾಗಿ ಅವರ ಹತ್ತಿರ ಮಾತನಾಡಿ ಮಾಡಬೇಕಾಗುತ್ತದೆ.

ವಿಷಯ: ವಕ್ಫ್ ಮಂಡಳಿಗೆ ನೀಡಿರುವ ಅಭಿವೃದ್ಧಿ ಅನುದಾನ.

239 (1448)

ಶ್ರೀ ಸಿ.ಆರ್.ಸಗೀರ್ ಅಹಮದ್ (ಚಿಕ್ಕಮಗಳೂರು): ಮಾನ್ಯ ಗೃಹ ಮತ್ತು ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸರ್ಕಾರ 1995-96, 1996-97 ಮತ್ತು 1997-98ನೇ ಸಾಲಿನಲ್ಲಿ ವಕ್ಫ್ ಮಂಡಳಿಗೆ ನೀಡಿರುವ ಅಭಿವೃದ್ಧಿ ಅನುದಾನ ಎಷ್ಟು?

ಆ) ಈ ಅಭಿವೃದ್ಧಿ ಅನುದಾನ ಯಾವ ಯಾವ ಸಂಸ್ಥೆಗಳಿಗೆ ನೀಡಲಾಗಿದೆ? (ಜಿಲ್ಲಾವಾರು ವಿವರ ನೀಡುವುದು)

ಶ್ರೀ ಆರ್.ರೋಷನ್‌ಬೇಗ್ (ಗೃಹ ಮತ್ತು ವಕ್ಫ್ ರಾಜ್ಯ ಸಚಿವರು):

ಅ) ಹಿಂದಿನ ಮೂರು ವರ್ಷಗಳಲ್ಲಿ ಸರ್ಕಾರವು ವಕ್ಫ್ ಬೋರ್ಡ್‌ಗೆ ಮಂಜೂರು ಮಾಡಿದ ಅಭಿವೃದ್ಧಿ ಅನುದಾನದ ವಿವರ ಈ ಕೆಳಕಂಡಂತಿದೆ:

ಕ್ರಮ ಸಂಖ್ಯೆ	ವರ್ಷ	ಸರ್ಕಾರವು ಮಂಜೂರು ಮಾಡಿದ ಹಣ
1.	1995-96	ರೂ. 2.00 ಕೋಟಿ
2.	1996-97	ರೂ. 2.00 ಕೋಟಿ
3.	1997-98	ರೂ. 1.90 ಕೋಟಿ

ಆ) ಈ ಅಭಿವೃದ್ಧಿ ಅನುದಾನವನ್ನು ನೋಂದಾಯಿತ ವಕ್ಫ್ ಸಂಸ್ಥೆಗಳು ಅಂದರೆ, ಮಸೀದಿ, ದರ್ಗಾ, ಈದಗಾ, ಮುಂತಾದವುಗಳಿಗೆ ರಿಪೇರಿ ಮತ್ತು ಅಭಿವೃದ್ಧಿ ಸಲುವಾಗಿ ಮಂಜೂರು ಮಾಡಲಾಗುತ್ತಿದೆ. ಜಿಲ್ಲಾವಾರು ವಿವರವನ್ನು ಅನುಬಂಧ - ಎರಲ್ಲಿ ನೀಡಲಾಗಿದೆ.

ANNEXURE - A

Statement showing the details of development grants sanctioned by Government for the years 1995-96, 96-97 and 97-98.

Sl. No.	Name of the District	No. of Wakf Institutions		
		1995-96	96-97	97-98
1.	Bangalore Urban	22	19	29
2.	Bangalore Rural	37	27	22
3.	Bellary	55	46	54
4.	Belgaum	68	45	52
5.	Bijapur	90	77	42
6.	Bidar	15	31	29
7.	Chickmagalur	15	14	7
8.	Chitradurga	67	49	27
9.	Dakshina Kannada	56	56	47
10.	Dharwad	89	80	28
11.	Gulbarga	29	77	75
12.	Hassan	38	33	22
13.	Kolar	81	47	42
14.	Mandya	38	31	24
15.	Mysore	42	53	32
16.	Kodagu	20	22	21

17.	Shimoga	56	43	57
18.	Raichur	59	66	21
19.	Tumkur	72	42	37
20.	Uttara Kannada	8	15	15
21.	Bagalkote	-	-	35
22.	Davanagere	-	-	29
23.	Udupi	-	-	11
24.	Haveri	-	-	33
25.	Gadag	-	-	21
26.	Chamarajanagar	-	-	11
27.	Koppal	-	-	35

ಶ್ರೀ ಸಿ.ಆರ್.ಸಗೀರ್ ಅಹಮದ್: ನಾನು ಕೇಳಿರುವಂಥ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಆ ವಕ್ಫ್ ಮಂಡಳಿಗೆ ಹಣವನ್ನು ಬಿಡುಗಡೆ ಮಾಡುವುದರಲ್ಲಿ ಸರ್ಕಾರ ವಿಳಂಬ ಮಾಡುತ್ತಿದೆ ಮಂತ್ರಿಗಳು ನೇರವಾಗಿ ಇದರ ಬಗ್ಗೆ ತಮ್ಮ ವಿಚಾರ ಹೇಳಬೇಕಾಗುತ್ತದೆ. ಅದನ್ನು ನೀಡುವ ಸಂದರ್ಭದಲ್ಲಿ ಸಂಪೂರ್ಣ ಅಧಿಕಾರ ಇದ್ದರೆ, ಈ ಜಿಲ್ಲಾವಾರು ಮಾಹಿತಿ ನೀಡುವುದರಲ್ಲಿ ತಾರತಮ್ಯ ಏಕೆ ಕಾಣುತ್ತದೆ? ಆದ್ದರಿಂದ ಮಂತ್ರಿಗಳು ಏಕೆ ಈ ರೀತಿಯಲ್ಲಿ ತಾರತಮ್ಯ ಮಾಡುತ್ತಾರೆ? ಈ ಸರ್ಕಾರ ಉತ್ತರ ನೀಡಿರುವ ಪ್ರಕಾರ 1997-98ರಲ್ಲಿ 2 ಕೋಟಿ ರೂಪಾಯಿಗಳನ್ನು ನಿಗದಿ ಮಾಡಿ ಒಂದು ಕೋಟಿ 90 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದೆ. 10 ಲಕ್ಷ ರೂಪಾಯಿಗಳನ್ನು ಕಡಿತ ಮಾಡಿದ್ದೀರಿ. ಮತ್ತೆ ಮುಂದಿನ ವರ್ಷಕ್ಕೆ ಒಂದು ಕೋಟಿ ರೂಪಾಯಿಗಳನ್ನು ಜಾಸ್ತಿ ಮಾಡುತ್ತೇವೆ ಎನ್ನುವುದನ್ನು ಹೇಳಿದ್ದೀರಿ ಅದನ್ನು ಎರಡು ಕೋಟಿ ರೂಪಾಯಿಗಳಿಗೆ ಹೆಚ್ಚಿಗೆ ಮಾಡಲಿಕ್ಕೆ ಆಲೋಚನೆ ಮಾಡುತ್ತೀರೋ?

ಶ್ರೀ ಆರ್.ರೋಷನ್ ಬೇಗ್: ಒಂದು ಕೋಟಿ ರೂಪಾಯಿಗಳನ್ನು ಹೆಚ್ಚಿಗೆ ಕೊಡುತ್ತೇವೆಂದು ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳಿದ್ದಾರೆ. ಆ ಎರಡು ಕೋಟಿ ರೂಪಾಯಿಗಳಲ್ಲಿ ಉಳಿದಿದ್ದು 10 ಲಕ್ಷ ರೂಪಾಯಿಗಳು, ಅದು ಬೇರೆ ರೀತಿಯಲ್ಲಿ ಬಿಡುಗಡೆ ಆಗುತ್ತದೆ. 10 ಲಕ್ಷ ರೂಪಾಯಿಗಳು ಕಡಿಮೆಯಾಗಿದೆ. ಸರ್ಕಾರವು ಅದನ್ನು ಬಿಡುಗಡೆ ಮಾಡುತ್ತವೆ.

ಶ್ರೀ ಸಿ.ಆರ್.ಸಗೀರ್ ಅಹಮದ್: 10 ಲಕ್ಷ ರೂಪಾಯಿಗಳ ಹಣವನ್ನು ಬಿಡುಗಡೆ ಮಾಡುವುದಕ್ಕೆ ಆದೇಶವನ್ನು ಹೊರಡಿಸಿದ್ದಾರೆ, ಮಂತ್ರಿಗಳಿಗೂ ಇದು ಗೊತ್ತಿದೆ. ಆ ಆದೇಶ ಹೊರಡಿಸಿ ಹೆಚ್ಚು ಕಡಿಮೆ ಎರಡು ತಿಂಗಳಾಯಿತು. ತಮ್ಮ ಖಜಾನೆ ಏನಾದರೂ ಖಾಲಿಯಾಗಿದೆಯೇ ಎಂಬುದನ್ನು ಮಾನ್ಯ ಮಂತ್ರಿಗಳು ಹೇಳಬೇಕು. ಇಲ್ಲಿಯವರೆಗೆ ಹಣ ಬಿಡುಗಡೆ ಆಗಬೇಕಾಗಿತ್ತು, ಹೋದ ವರ್ಷದ ಹಣ ಏಕೆ ಉಳಿಯಿತು? ಅದಕ್ಕೆ ಕಾರಣ ಏನು? ದಯಮಾಡಿ ಮಾನ್ಯ ಮಂತ್ರಿಗಳು ಹೇಳಬೇಕು.

ಶ್ರೀ ಆರ್.ರೋಷನ್‌ಬೇಗ್: ಸಗೀರ್ ಅಹಮದ್‌ರವರು ದೊಡ್ಡ ಕಾಫಿ ಪ್ಲಾಂಟರು, ಅವರು ಏಕೆ ಇದರ ಬಗ್ಗೆ ಇಷ್ಟು ಯೋಚನೆ ಮಾಡುತ್ತಾರೆ? ದೇವರು ಅವರಿಗೆ ಒಳ್ಳೆಯದನ್ನು ಮಾಡಲಿ. ಖಜಾನೆ ಸರಿಯಾಗಿಯೇ ಇದೆ. ಹಣ ಬಿಡುಗಡೆ ಆಗುತ್ತದೆ ಎಂದು ನಾನು ಅವರಿಗೆ ಆಶ್ವಾಸನೆ ಕೊಡುತ್ತೇನೆ.

ಶ್ರೀ ಸಿ.ಆರ್.ಸಗೀರ್ ಅಹಮದ್: ನಾನು ಕಾಫಿ ಪ್ಲಾಂಟರ್ ಆಗಿರುವುದಕ್ಕೂ ವಕ್ಫ್ ಮಂಡಳಿಗೆ ಹಣ ಬಿಡುಗಡೆ ಮಾಡುವುದಕ್ಕೆ ಏನು ಸಂಬಂಧ ಇದೆ?

ಅಧ್ಯಕ್ಷರು: ನೀವು ದೇಣಿಗೆ ಕೊಡಬೇಕು ವಕ್ಫ್ ಮಂಡಳಿಗೆ ಎಂದು.

ಶ್ರೀ ಸಿ.ಆರ್.ಸಗೀರ್ ಅಹಮದ್: ಅಧ್ಯಕ್ಷರೆ, ತಮ್ಮಲ್ಲಿ ನನ್ನ ವಿನಂತಿ ಏನೆಂದರೆ, ಮತ್ತು ದುರಾದೃಷ್ಟ ಅಂದರೆ, ಎರಡು ದಿಸೆಯಲ್ಲಿ ಇದೆ. ನಾನು ಹಾಕಿದ ಉಪ ಪ್ರಶ್ನೆಗೆ ಸಾಬರು ಮಂತ್ರಿಗಳು ಇರುತ್ತಾರೆ. ಆ ಉಪ ಪ್ರಶ್ನೆಗೆ ಉತ್ತರ ಬರುತ್ತದೆ. ಲಿಖಿತ ಮೂಲಕ ನೀಡುವ ಪ್ರಶ್ನೆಗೆ ಇದೇ ಆಗುತ್ತದೆ. ಇದು ನನ್ನ ದುರಾದೃಷ್ಟ ನನ್ನ ಅದೃಷ್ಟ ಸರಿಯಿಲ್ಲವೆಂದು ತಿಳಿದುಕೊಳ್ಳೋಣ. ಮಾನ್ಯ ಸಣ್ಣ ಕೈಗಾರಿಕೆ ಮಂತ್ರಿಗಳು ಕೂಡ ಹೇಳುತ್ತಾರೆ. ಒಂದು ಕೋಟಿ ರೂಪಾಯಿಗಳನ್ನು ಹೆಚ್ಚಿಗೆ ಬಿಡುಗಡೆ ಮಾಡುತ್ತೇವೆಂದು ಹೇಳುತ್ತಾರೆ. ಸನ್ಮಾನ್ಯ ಸಭಾಧ್ಯಕ್ಷರೇ, ನನ್ನ ಬಗ್ಗೆ ತಾವು ಚಿಂತನೆ ಮಾಡಬೇಡಿ. ಬಹಳ ಜನ ಈ ಬಡಸಂಸ್ಥೆಯ ಆಡಳಿತ ಮಂಡಳಿಯವರು, ಅದರ ಅಧ್ಯಕ್ಷರು ಮತ್ತು ಉಪಾಧ್ಯಕ್ಷರುಗಳು ಬಂದು ಸಚಿವರನ್ನು ಭೇಟಿ ಆಗುತ್ತಿರುವುದರಿಂದ ಅವರ ಸಮಸ್ಯೆ ಬಗೆಹರಿಸುವ ಬಗ್ಗೆ ನಾನು ಸಲಹೆ ನೀಡುತ್ತೇನೆ ಮತ್ತು ಅವರ ಬಗ್ಗೆ ಚಿಂತನೆ ಮಾಡಿ ಎಂದು ನನ್ನ ಸಲಹೆಯನ್ನು ಅಧ್ಯಕ್ಷರ ಮುಖಾಂತರವಾಗಿ ತಮಗೆ ಕೊಡುತ್ತಿದ್ದೇನೆ.

ಶ್ರೀ ಸಿ.ಆರ್.ರೋಷನ್ ಬೇಗ್: ಅಧ್ಯಕ್ಷರೆ, ಇದು ಆಗಬಹುದು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು): ಈ ವಕ್ಫ್ ಬೋರ್ಡಿಗೆ ಆಗಲಿ, ತಮ್ಮ ಅನುದಾನದ ಸ್ಕೀಂನಲ್ಲಿ ಜ್ಯೂನಿಯರ್ ಇಂಜಿನಿಯರ್ ಇರುತ್ತಾರೆ, ಅವರು ಎಸ್ಟಿಮೇಟ್ ಮಾಡಿಕೊಡುತ್ತಾರೆ. ಅದನ್ನು ಮಾಡಿಕೊಡಬೇಕಾದರೆ ಅವರು ಸಾಕಷ್ಟು ತಿರುಗಾಡಿಸುತ್ತಾರೆ. ಆಮೇಲೆ ಇವರ ಹತ್ತಿರ ಬಂದು ರಿಜಿಸ್ಟ್ರೇಷನ ಆಗುತ್ತದೆ ಆಮೇಲೆ ವೆರಿಫೈ ಮಾಡಿ ಆ ಚೆಕ್ ಹೋಗಬೇಕಾದರೆ ಒಂದು ಸಾವಿರ ರೂಪಾಯಿಗಳವರೆಗೆ ಖರ್ಚಾಗುತ್ತದೆ.

ಅಧ್ಯಕ್ಷರು: ಒಂದು ಸಾವಿರ ರೂಪಾಯಿಗಳು ಆದರೂ ಆಗಬಹುದು. ಮುಜರಾಯಿ ಇಲಾಖೆಯದ್ದು 7-8 ವರ್ಷ ಆಗಿದೆ. ಅದು ಇನ್ನೂ ಬಂದಿಲ್ಲ. ಅದರ ಬಗ್ಗೆ ಯಾರಿಗೂ ಆಸಕ್ತಿ ಇಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಗುಡಿಗೆ ಒಂದು ಎಸ್ಟಿಮೇಟ್ ಮಾಡಿಕೊಡುವುದಕ್ಕೆ ಆ ಸಂಸ್ಥೆಯವರು ಜೂನಿಯರ್ ಇಂಜಿನಿಯರ್ ಅವರಿಗೆ 200, 300 ನೂರು ರೂಪಾಯಿಗಳನ್ನು ಕೊಡದೇ ಹೋದರೆ ಅವನು ಎಸ್ಟಿಮೇಟ್ ತಯಾರು ಮಾಡಿಕೊಡುವುದಿಲ್ಲ. ಹೀಗಾದರೆ ಆ ದುಡ್ಡು ಬಿಡುಗಡೆಯಾಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್: ದೇವಸ್ಥಾನ ಎಸ್ಟಿಮೇಟ್ ಮಾಡಿಕೊಡುವುದಕ್ಕೂ ದುಡ್ಡು ತೆಗೆದುಕೊಳ್ಳುತ್ತಾರೆ ಎಂದರೆ, ಅವರು ದೇವರಿಗೂ ಲಂಚ ಕೇಳಿದಂತಾಗುತ್ತದೆ.

ಅಧ್ಯಕ್ಷರು: ದೇವರುಗಳಿಗೆ ಆ ಕೆಲಸ ಆಗಬೇಕು. ಅವರು ನಮಗೆ ಏನು ಕಡಿಮೆ ಲಸ ಕೊಟ್ಟಿದ್ದಾರೆಯೇ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮೊನ್ನೆ ಮಾನ್ಯ ಮುಖ್ಯಮಂತ್ರಿಗಳು ಇದಕ್ಕಾಗಿ ಅಯ್ಯಪ್ಪಸ್ವಾಮಿ ದೇವಸ್ಥಾನಕ್ಕೆ ಹೋಗಿ ಬಂದರು. ಪರಿಸ್ಥಿತಿ ಹೀಗಾಗಿದೆ, ದಯಮಾಡಿ ನೋಡಿ, ಗುಡಿಗೆ ಲಂಚ ಕೇಳುತ್ತಿದ್ದಾರೆ. ಅದಕ್ಕಾಗಿ ಅವರು ಅಯ್ಯಪ್ಪಸ್ವಾಮಿಗೆ ಹೋಗಿದ್ದರು.

ಶ್ರೀ ಬಿ.ಎ.ಮೊಯಿದ್ದೀನ್: ಅದರ ಬಗ್ಗೆ ನೀವು ಕುಂಬ್ಳೆ ಸುಂದರರಾವ್‌ರನ್ನು ಕೇಳಿದರೆ ಅವರು ಸರಿಯಾಗಿ ಹೇಳುತ್ತಾರೆ.

ಶ್ರೀ ಕುಂಬ್ಳೆ ಸುಂದರರಾವ್: ಪುರಾಣಗಳಲ್ಲಿ ಹಾಗೆ ಇಲ್ಲಿ, ಆಟದಲ್ಲಿ ಹಾಸ್ಯಕ್ಕಾಗಿ ಆ ರೀತಿ ಸೃಷ್ಟಿಸಿದ್ದಾರೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಜಿಲ್ಲಾ ಮಟ್ಟದಲ್ಲಿ ಇದಕ್ಕೆ ಮಾನಿಟರ್ ಆದರೂ ಮಾಡಬೇಕು. ಹಳ್ಳಿಯಿಂದ ತಾಲ್ಲೂಕಿಗೆ, ಅಲ್ಲಿಂದ ಜಿಲ್ಲೆಗೆ, ಆಮೇಲೆ ಇದು ಇಲ್ಲಿಗೆ ಬರಬೇಕು. ಅದು ಬಂದ ನಂತರ ಅಪ್ರೂವಲ್ ಆದ ನಂತರ ಹಣ ಬಿಡುಗಡೆ ಆಗಬೇಕು. ಉತ್ತರ ಕರ್ನಾಟಕದಿಂದ ಬರತಕ್ಕಂಥ ಜನರಿಗೆ ಒಂದು ಸಾವಿರ ರೂಪಾಯಿಗಳಿಂದ ಎರಡು ಸಾವಿರ ರೂಪಾಯಿಗಳವರೆಗೆ ಖರ್ಚಾಗುತ್ತದೆ. ಇವರು ಕೊಡುವುದು 15 ಸಾವಿರ ರೂಪಾಯಿಗಳು. ಅಧ್ಯಕ್ಷರೆ, ನೀವು ಆ ಮುಜರಾಯಿ ಇಲಾಖೆಯವರು ಮಾಡಿರುವ ಲಿಸ್ಟನ್ನು ನೋಡಿಲ್ಲವೆಂದು ಕಾಣುತ್ತದೆ. ಅಧ್ಯಕ್ಷರೆ, ನೀವು ಅದೃಷ್ಟವಂತರು, ಕೋಲಾರ ಜಿಲ್ಲೆಗೆ ಬಂದಿದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆ ಪರವಾಗಿಲ್ಲ. ಬೇರೆ ಎಲ್ಲಾ ಕಡೆ 25 ಸಾವಿರ ರೂಪಾಯಿಗಳಿಂದ 30 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದಾರೆ.

ಅಧ್ಯಕ್ಷರು: ಕೋಲಾರ ಜಿಲ್ಲೆಗೆ ಬಂದಿರುವುದು; ಅದು ನನಗೆ ಏನೂ ಬಂದಿಲ್ಲ.

ಶ್ರೀ ವಾಟಾಳ್ ನಾಗರಾಜ್: ತಾವು ಏಕೆ ಅನುಮಾನ ಪಡುತ್ತಿದ್ದೀರಿ? ಕೋಲಾರ ಜಿಲ್ಲೆ ಅಂದರೆ ನೀವು ಒಬ್ಬರೇ ಆಗುವುದಿಲ್ಲ. ತಾವು ತಕ್ಷಣ ಏಕೆ ಅನುಮಾನ ಪಟ್ಟಿರಿ ಎಂಬುದು ಗೊತ್ತಾಗಲಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ರೋಷನ್ ಬೇಗ್‌ರವರು ನಮ್ಮ ಕಡೆ ಮುಸ್ಲಿಂರನ್ನು ಅವರನ್ನು ಮುಸ್ಲೀಮರು ಅಲ್ಲವೆಂದು ತಿಳಿದುಕೊಂಡಿದ್ದಾರೋ ಗೊತ್ತಿಲ್ಲ. 10 ಸಾವಿರ 15 ಸಾವಿರ ನಮಗೆ ಕೊಟ್ಟರೆ ಬೇರೆ ಕಡೆ 25, 30, 40 ಸಾವಿರ ರೂಪಾಯಿಗಳನ್ನು ಕೊಟ್ಟಿರುತ್ತೀರಿ. ನೀವು ತಾರತಮ್ಯ ಮಾಡಬಾರದು. ವಕ್ಫ್ ಬೋರ್ಡಿನವರು ಎಲ್ಲರನ್ನೂ ಒಂದೇ ದೃಷ್ಟಿಯಿಂದ ನೋಡಬೇಕು. ಇಲ್ಲಿ ಕಬರಸ್ಥಾನ ಕಾಂಪೌಂಡ್ ಹಾಕುವುದಕ್ಕೆ 30 ಸಾವಿರ ಬೇಕಾದರೆ ನಮ್ಮ ಕಡೆಯ ಕಾಂಪೌಂಡ್‌ಗಳಿಗೆ 10 ಸಾವಿರದಲ್ಲಿ ಮುಗಿಯುತ್ತದೆಯೇ? ದಯಮಾಡಿ ಸ್ವಲ್ಪ ನೋಡಿ, ಎಲ್ಲಾ ಕಡೆ

ತಾರತಮ್ಯ ಮಾಡದೆ ಇದನ್ನು ಸರಿಪಡಿಸತಕ್ಕಂಥದ್ದನ್ನು ಮಾಡಬೇಕು. ಮತ್ತು ಬೇಗನೆ ಅಪ್ರೂವಲ್ ಆಗುವ ಹಾಗೆ ನೀವು ನಿರ್ದೇಶನ ಕೊಡಬೇಕು. ಅವರು ಮ್ಯಾಪ್ ತಂದ ತಕ್ಷಣ ಅವರ ಕೆಲಸ ಆಗಬೇಕು.

ಅಧ್ಯಕ್ಷರು: ಇದಕ್ಕೆ ನ್ಯಾಶನಲ್ ಅಪ್ರೋಚ್ ಇರಬೇಕು. We can take this suggestion.

ಶ್ರೀ ಆರ್.ರೋಷನ್‌ಬೇಗ್: ಅಧ್ಯಕ್ಷರೆ, ಆಯಿತು.

ಅಧ್ಯಕ್ಷರು: ಪ್ರಶ್ನೋತ್ತರ ಸಮಯ ಮುಗಿಯಿತು.

ಅ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಡಿ.ಮಂಜುನಾಥ್ (ಅರಣ್ಯ ಸಚಿವರು): ಈ ದಿನದ ಲಿಖಿತ ಮೂಲಕ ಉತ್ತರಿಸುವ 17ನೇ ಪ್ರಶ್ನೆಗಳ ಪಟ್ಟಿಯಲ್ಲಿನ ಒಟ್ಟು 86 ಪ್ರಶ್ನೆಗಳ ಪೈಕಿ 55 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದ ಮುಂದಿಡುತ್ತಿದ್ದೇನೆ.

ವಿಷಯ: ಬಳ್ಳಾರಿ ಜಿಲ್ಲೆಯಲ್ಲಿರುವ ಮೊರಾರ್ಜಿ ವಸತಿ ಶಾಲೆಗಳು

1017 (1450)

ಶ್ರೀ ಅಲ್ಲಂ ವೀರಭದ್ರಪ್ಪ (ಕುರಗೋಡು): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಳ್ಳಾರಿ ಜಿಲ್ಲೆಯಲ್ಲಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳೆಷ್ಟು?

ಆ) ಇವುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿ:ವಿದ್ಯಾರ್ಥಿನಿಯರ ಸಂಖ್ಯೆ ಎಷ್ಟು?

ಇ) 1998-99ರಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ಹೊಸದಾಗಿ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಪ್ರಾರಂಭಿಸಲಾಗುವುದೇ?

ಈ) ಹಾಗಿದ್ದಲ್ಲಿ, ಎಲ್ಲೆಲ್ಲಿ ಪ್ರಾಂಭಿಸಲಾಗುವುದು?

ಶ್ರೀ ಕೆ.ಎಂ.ಕೃಷ್ಣಾರೆಡ್ಡಿ (ಸಮಾಜ ಕಲ್ಯಾಣ ಸಚಿವರು):

ಅ) ಬಳ್ಳಾರಿ ಜಿಲ್ಲೆಯಲ್ಲಿ ಒಟ್ಟು ಮೂರು (3) ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಿವೆ.